# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-2502/2017/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:27-02-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಕೊಂಚೆ ಶಿವರುದ್ರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ರಾಷ್ಟ್ರೀಯ ಕಿಸಾನ ಸಂಘ, ಕೂನಬೇವು ಗ್ರಾಮ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಕೊಂಚೆ ಶಿವರುದ್ರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ರಾಷ್ಟ್ರೀಯ ಕಿಸಾನ ಸಂಘ, ಕೂನಬೇವು ಗ್ರಾಮ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರು (1) ಶ್ರೀ ಮಹಾಂತೇಶ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಮತ್ತು (2)ಶ್ರೀ ಬಿ.ಎಲ್. ಕುಮಾರ ಸಿಂಗ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗುಡ್ಡದ ನೇರಲಕೆರೆ ಗ್ರಾಮ ಪಂಚಾಯತಿ, ಹೊಸದರ್ಗು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ರವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

2015-16ನೇ ಸಾಲಿನ ಗುಡ್ಡದ ನೇರಲಕೆರೆ ಗ್ರಾಮ ಪಂಚಾಯತಿಗೆ ಲೆಕ್ಕಪರಿಶೋದನೆ ಆಗಿದ್ದು, ಲೆಕ್ಕಪರಿಶೋದಕರು ಒಂದು ವರದಿಯನ್ನು ಕೊಟ್ಟಿದ್ದು, ಅದರಲ್ಲಿ ಆಕ್ಷೇಪಣೆಗಳ ಮೊತ್ತ ರೂ.56,38,134/- ಮತ್ತು ವಸೂಲಾತಿ ಮೊತ್ತ ರೂ.3,23,878/- ಇರುತ್ತದೆ. 1994-95 ರಿಂದ ಇದುವರೆಗೂ ಕಾಲಕಾಲಕ್ಕೆ ಆಕ್ಷೇಪಣೆಗಳ ಮೊಬಲಗು ಮತ್ತು ವಸೂಲಾತಿ ಮೊಬಲಗು ಬರುತ್ತಿದ್ದು, ಆಕ್ಷೇಪಣೆಗಳ ಮತ್ತು ವಸೂಲಾತಿ ಮೊತ್ತಗಳ ತಿರುವಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಯ ಆಡಳಿತ ವರ್ಗದವರು ಕಲಂ 246(6) ಮತ್ತು 246(8) ರಲ್ಲಿ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ ಅಂತ ಸದರಿ ಲೆಕ್ಕಪರಿಶೋದನಾ ಅಧಿಕಾರಿಗಳು ಸೂಚಿಸಿದ್ದಾರೆ. ಆದರೆ ಎದುಗುದಾರರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಿಯಮಿತವಾಗಿ ಅಡಹಕ್ ಸಮಿತಿಯ ಸಭೆಗಳನ್ನು ನಡೆಸಲಾಗಿದ್ದು, ಅನುಪಾಲನಾ ವರದಿಗಳನ್ನು ಸಲ್ಲಿಸಿ, ತಿರುವಳಿ ಮಾಡಿಕೊಳ್ಳುವಂತೆ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ. ಕಾರಣ-ಕೇಳುವ-ನೋಟಿಸ್ ಅನ್ನು ಕೊಡಲಾಗಿದೆ. ಕೆಲವು ಪಿ.ಡಿ.ಓ. ಗಳಿಗೆ ಕೆ.ಸಿ.ಎಸ್.ಆರ್. ನಿಯಮಾವಳಿಗಳ ಪ್ರಕಾರ ಅನುಬಂಧ-1 ರಿಂದ 4 ಅನ್ನು ಜಾರಿ ಮಾಡಿ ಮೇಲಾಧಿಕಾರಿಗಳಿಗೆ ವರದಿಯನ್ನು ಮಾಡಿರುತ್ತೇನೆ. ಇದುವರೆಗೆ ರೂ.7,87,671/- ಆಕ್ಷೇಪಣೆ ಮೊತ್ತವನ್ನು ತಿರುವಳಿ ಮಾಡಲಾಗಿದೆ. ಆದರೆ, ಸರ್ಕಾರದ ನಿಯಮದಂತೆ ಪ್ರತಿ ವರ್ಷ 4 ಅಡಹಕ್ ಸಮೀತಿಯ ಸಭೆಗಳನ್ನು ಕರೆದರೂ ಸಹ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಾಲನಾ ವರದಿಯನ್ನು ಸಲ್ಲಿಸಿ, ವಿಲೇ ಪಡೆಯದೇ ಬಾಕಿ ಉಳಿಸಿಕೊಂಡಿದ್ದಾರೆ. ಆದ್ದರಿಂದ, ಪ್ರಕರಣವನ್ನು ಕೈಬಿಡಲು ಕೋರಿರುತ್ತಾರೆ.

(ಬಿ) 2ನೇ ಎದುರುದಾರರು ಸಹ 1ನೇ ಎದುರುದಾರರ ಆಕ್ಷೇಪಣೆಗಳನ್ನೇ ಅಳವಡಿಸಿಕೊಂಡಿದ್ದಾರೆ. ಹಿಂದಿನ ಪಿ.ಡಿ.ಓ/ಕಾರ್ಯದರ್ಶಿಗಳಿಗೆ ಅನುಪಾಲನಾ ವರದಿಗಳನ್ನು ಸಲ್ಲಿಸುವಂತೆ ನೋಟಿಸ್ ನೀಡುವ ಮೂಲಕ ತಿರುವಳಿ ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು ಅಂತ ತಿಳಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ ನಂತರ ಸರ್ಕಾರಕ್ಕೆ ಬರಬೇಕಾದ ಹಣ ವಸೂಲಿ ಮಾಡಿ ಜಮಾ ಮಾಡಲು ಕ್ರಮವನ್ನು ಕೈಗೊಂಡಿದ್ದು, ಲೋಕಾಯುಕ್ತಕ್ಕೆ ಅಭಿನಂದನೆ ಹಾಗೂ ಈಗಿನ ತಾಲ್ಲೂಕು ಪಂಚಾಯತಿಯ ಇ.ಓ. ಹಲವು ವರ್ಷಗಳ ಬಾಕಿ ಜಮಾ ವಹಿಸಿದ್ದು, ಸ್ವಾಗತರ್ಹ, ನನ್ನ ದೂರಿಗೆ ನ್ಯಾಯ ಸಿಕ್ಕಿದೆ. ಲೋಕಾಯುಕ್ತಕ್ಕೆ ಅಭಿನಂದಿಸುತ್ತಾ ಈ ಪ್ರಕರಣವನ್ನು ನಾನು ಮುಕ್ತಾಯಗೊಳಿಸಿದ್ದು, ಇದು ನನ್ನ ಹೇಳಿಕೆಯಾಗಿದೆ ಅಂತ ನಮೂದಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರಿಗೆ ಆಕ್ಷೇಪಣಾ ಮೊತ್ತ ಮತ್ತು ವಸೂಲಾತಿ ಮೊತ್ತಗಳ ನಡುವಿನ ವ್ಯತ್ಯಾಸವೇ ಗೊತ್ತಿಲ್ಲ. ಗ್ರಾಮ ಪಂಚಾಯತಿಯ ವತಿಯಿಂದ ಖರ್ಚಾಗಿರುವ ಹಣಕ್ಕೆ ಪೂರಕ ದಾಖಲೆಗಳನ್ನು ಆಡಿಟ್ ಸಮಯದಲ್ಲಿ ಹಾಜರುಪಡಿಸದೇ ಹೋದರೇ ಅದನ್ನು ಆಕ್ಷೇಪಣಾ ಮೊತ್ತ ಎನ್ನುತ್ತಾರೆ. ಕೇವಲ ಆಕ್ಷೇಪಣಾ ಮೊತ್ತದ ತಿರುವಳಿ ಮಾಡುವುದರಿಂದ ಆಡಿಟ್ ಆಕ್ಷೇಪಣೆಗಳು ಮುಗಿದಂತೆ ಆಗುವುದಿಲ್ಲ. ಲೆಕ್ಕ ಪರಿಶೋದಕರಿಗೆ ದಾಖಲೆಗಳನ್ನು ಸಲ್ಲಿಸಿ ಲೆಕ್ಕಪರಿಶೋದನಾ ವರದಿಯನ್ನು ತೋರಿಸಿರುವ ಮೊತ್ತವನ್ನು ತಿರುವಳಿ ಮಾಡಲಾಗಿದೆ ಅಂತ ತಿಳಿಸಿ ಅವರಿಂದ ಅನುಮೋದನೆಯ ಆದೇಶವನ್ನು ಪಡೆಯಬೇಕಾಗುತ್ತದೆ.

ಆಡಿಟ್ ವರದಿಯಲ್ಲಿ ಕಲಂ 246(6) ಮತ್ತು 246(8) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಂತೆ ಕ್ರಮ ವಹಿಸಲು ಸ್ಥಳೀಯ ಲೆಕ್ಕಪರಿಶೋದನಾ ವರ್ತುಲದ ಹಿರಿಯ ಉಪನಿರ್ದೇಶಕರು, ಸೂಚಿಸಿದ್ದಾರೆ.

6. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 246(6) ರಿಂದ 246(8) ರಲ್ಲಿ ಈ ಕೆಳಕಂಡಂತೆ ವಿಧಿಸಲಾಗಿದೆ:

**(6) On receipt of the audit report, the Grama Panchayat shall either remedy any defects or irregularities which have been pointed out in the report and send to the Executive Officer within three months an intimation of its having done so, or shall within the same period furnish to the Executive Officer any further explanation in regard to such defects or irregularities.**

**(7) On receipt of such intimation or explanation in respect of all or any of the matters discussed in the audit report, the Executive officer may, in consultation with the auditor,-**

**(a) accept the intimation or explanation given by the Grama Panchayat and order the withdrawal of the objection, or**

**(b) direct that the matter be reinvestigated at the next audit or at any earlier date, or**

**(c) direct that the defects or irregularities pointed out in the audit report or any of them shall be removed or remedied by the Grama Panchayat.**

**(8) The Executive Officer may, after making such enquiry as he may consider necessary disallow any item of expenditure which appears to him to be contrary to law and surcharge the amount thereof on the person making or authorising the illegal payment and after taking the explanations of the person concerned, the Executive Officer may direct by an order in writing that such person shall pay to the Grama Panchayat the amount surcharged along with interest at fifteen percent per annum on the amount due, from the date from which it became due and if the amount is not paid within two months from the date of such order, the Executive Officer shall take steps to recover it as an arrears of land revenue and credit it to the Grama Panchayat Fund.**

7. ಈ ಪ್ರಕರಣದ ದೂರುದಾರರು ತಾನು ಈ ಪ್ರಕರಣವನ್ನು ಮುಕ್ತಾಯಗೊಳಿಸಿದ್ದೇನೆ ಎನ್ನಲು ಅವರಿಗೆ ಯಾವುದೇ ಅಧಿಕಾರ ಇಲ್ಲ.

8. ಮೇಲಾಗಿ, 1ನೇ ಎದುರುದಾರರು ಸಂಬಂದಪಟ್ಟ ಪಿ.ಡಿ.ಓ./ಕಾರ್ಯದರ್ಶಿಗಳ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ವಿವರಿಸಿಲ್ಲ. ವಸೂಲಾತಿ ಮೊತ್ತ ರೂ.3,23,878/- ಗಳಲ್ಲಿ ಎಷ್ಟು ಮೊತ್ತವನ್ನು ತಿರುವಳಿ ಮಾಡಲಾಗಿದೆ ಎನ್ನುವುದನ್ನು ಹೇಳಿರುವುದಿಲ್ಲ.

9. ಎದುರುದಾರರು ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋದನಾ ವರ್ತುಲ ಚಿತ್ರದುರ್ಗ ಇವರಿಗೆ ಪತ್ರವನ್ನು ಬರೆದು ಆಕ್ಷೇಪಣೆ ಮತ್ತು ವಸೂಲಾತಿಯ ನ್ಯೂನ್ಯತೆಗಳು ಇರುವ ಯಾವ-ಯಾವ ಕಂಡಿಕೆಗಳನ್ನು ಕೈಬಿಡಲಾಗಿದೆ ಕೈಬಿಡಲು ಕೋರಿಕೊಂಡಿದ್ದಾರೆ ಮತ್ತು ಅದರ ಮೇಲೆ ಲೆಕ್ಕ ಪರಿಶೋದನಾ ವರ್ತುಲವು ಯಾವುದಾದರೂ ಖಂಡಿಕೆಗಳನ್ನು ಕೈಬಿಟ್ಟಿದಿಯೇ ಎನ್ನುವ ಬಗ್ಗೆಯೂ ಸಹ ಯಾವುದೇ ವರದಿಯನ್ನು ಎದುರುದಾರರು ಸಲ್ಲಿಸಿರುವುದಿಲ್ಲ.

10. ಆದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 246(6) ರಿಂದ 246(8) ರ ಅಡಿಯಲ್ಲಿ ಕ್ರಮಗಳನ್ನು ವಹಿಸಿ ಬಾಕಿ ಉಳಿದಿರುವ ವಸೂಲಾತಿ ಮೊತ್ತ ರೂ.3,23,878/- ಗಳನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು/ ಅಧ್ಯಕ್ಷರು/ಸದಸ್ಯರಿಂದ ವಸೂಲಿ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಮತ್ತು ಸರ್ಕಾರದ ಹಣವನ್ನು ಯಾವುದೇ ವಿವರಣೆ ಇಲ್ಲದೇ ನೌಕರರು/ ಅಧಿಕಾರಿಗಳು, ಗ್ರಾಮ ಪಂಚಾಯತಿ/ ತಾಲ್ಲೂಕು ಪಂಚಾಯತಿ, ಅಧ್ಯಕ್ಷರು/ ಉಪಾಧ್ಯಕ್ಷರು/ ಸದಸ್ಯರುಗಳು ತಮ್ಮ ಬಳಿ ಇಟ್ಟುಕೊಳ್ಳುವುದು ಅಥವಾ ಸೂಕ್ತ ಲೆಕ್ಕಪತ್ರಗಳಲ್ಲಿ ತೋರಿಸದೇ ಇರುವುದು ಸರ್ಕಾರದ ಹಣದ ಅಪರಾಧಿಕ ದುರುಪಯೋಗವಾಗುವುದರಿಂದ ಸಂಬಂದಪಟ್ಟವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲು ಮತ್ತು ಕಲಂ 200(4) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಅಡಿಯಲ್ಲಿ ಕಾನೂನಿನ ಪ್ರಕಾರ ಸೂಕ್ತ ಕ್ರಮಗಳನ್ನು ವಹಿಸಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/2/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ